Fax: 08282-256262
E-mail:kuvempuacademic@gmail.com

Phone No - 08282-256149
Website: www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ಶೈಕ್ಷಣಿಕ ವಿಭಾಗ, ವಿಶ್ವವಿದ್ಯಾಲಯ ಕಾರ್ಯಾಲಯ, ಕುವೆಂಪು ಶತಮಾನೋತ್ಸವ ಭವನ,
ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ.

ಸಂಖ್ಯೆ:ಕುವಿ:ಶೈವಿ:ಎಸಿ–4(180ಎಫ್): 3130:2024–25 ದಿನಾಂಕ:15–11–2024

## ಸುತ್ತೋಲೆ

ವಿಷಯ: **2024–25ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿ ಪ್ರವೇಶಾತಿಯಲ್ಲಿ ರಿಕ್ತ ಸ್ಥಾನಗಳನ್ನು ಭರ್ತಿ ಮಾಡುವ ಕುರಿತು.**

ಉಲ್ಲೇಖ: 1. ವಿ.ವಿ. ಅಧಿಸೂಚನೆ ಸಂಖ್ಯೆ:ಕುವಿ:ಶೈವಿ:ಎಸಿ–4:**2570**:2024–25, ದಿನಾಂಕ:08–10–2024.
2. ವಿ.ವಿ. ಪರಿಷ್ಕೃತ ಅಧಿಸೂಚನೆ ಸಂಖ್ಯೆ:ಕುವಿ:ಶೈವಿ:ಎಸಿ–4:**2759**:2024–25, ದಿನಾಂಕ:21–10–2024.
3. ವಿ.ವಿ. ಪರಿಷ್ಕೃತ ಅಧಿಸೂಚನೆ–1ರ ಸಂಖ್ಯೆ:ಕುವಿ:ಶೈವಿ:ಎಸಿ–4:**2924**:2024–25, ದಿನಾಂಕ:05–11–2024.

*****

ವಿಶ್ವವಿದ್ಯಾಲಯದ 2024–25ನೇ ಸಾಲಿನ ಪ್ರಥಮ ವರ್ಷದ ಸ್ನಾತಕೋತ್ತರ ಪ್ರವೇಶಾತಿಗೆ ಸಂಬಂಧಿಸಿದಂತೆ ಉಲ್ಲೇಖಿತ(1), (2) ಮತ್ತು (3)ರಲ್ಲಿ ಅಧಿಸೂಚನೆಗಳನ್ನು ಹೊರಡಿಸಲಾಗಿದ್ದು, ಪ್ರವೇಶಾತಿ ಕೌನ್ಸಿಲಿಂಗ್ ಪ್ರಕ್ರಿಯೆಗಳನ್ನು **ದಿನಾಂಕ:14–11–2024 ಮತ್ತು 15–11–2024ರಂದು** ಆಯಾ ಸ್ನಾತಕೋತ್ತರ ವಿಭಾಗಗಳಲ್ಲಿ ನಡೆಸಲಾಗುತ್ತಿದೆ. ಮುಂದುವರೆದಂತೆ, ಕೆಲವು ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ನಿಗದಿತ ಮೆರಿಟ್ ಕೋಟಾದಡಿ ಪ್ರವೇಶಮಿತಿ ಭರ್ತಿಯಾಗದಿರುವ ಕುರಿತು ವಿಭಾಗಾಧ್ಯಕ್ಷರುಗಳು ಮೌಖಿಕವಾಗಿ ಕೋರಿರುವುದರಿಂದ, ಆಯಾ ವಿಭಾಗಕ್ಕೆ ನಿಗದಿ ಪಡಿಸಿರುವ ಪ್ರವೇಶಮಿತಿಗೊಳಪಟ್ಟು ಕೆಳಕಂಡಂತೆ ಪ್ರವೇಶಾತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

1. ಖಾಲಿ ಇರುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, SC/ST ಕೋಟಾದಡಿಯಲ್ಲಿನ ಮೆರಿಟ್ ಸೀಟುಗಳನ್ನು ಇತರೆ ಅರ್ಹ ಅಭ್ಯರ್ಥಿಗಳಿಂದ ಮೆರಿಟ್ ಆಧಾರದ ಮೇಲೆ ಹಾಗೂ ಮೆರಿಟ್ ಕಮ್ ಪೇಮೆಂಟ್ ಸೀಟುಗಳನ್ನು ಮೆರಿಟ್ ಕಮ್ ಪೇಮೆಂಟ್(ಆಯಾ ಕೋಟಾಗಳಿಗೆ ನಿಗದಿಪಡಿಸಿರುವ ಶುಲ್ಕಗಳನ್ನು ಪಾವತಿಸಿಕೊಂಡು) ಆಧಾರದ ಮೇಲೆ ದಿನಾಂಕ:15–11–2024ರೊಳಗೆ ಭರ್ತಿ ಮಾಡಿಕೊಳ್ಳಲು ಅನುಮತಿಸಲಾಗಿದೆ.
2. ವಿಶೇಷ ಕೋಟಾಗಳಾದ CDP, PwD, KM, GdM, HYK, NCC, NSS, Sports ಯಡಿಯಲ್ಲಿ ಸೀಟುಗಳು ಖಾಲಿ ಉಳಿದ ಪಕ್ಷದಲ್ಲಿ, ಆಯಾ ವಿಭಾಗಗಳ ಮೆರಿಟ್ ಸೀಟುಗಳನ್ನು ಇತರೆ ಅರ್ಹ ಅಭ್ಯರ್ಥಿಗಳಿಂದ ಮೆರಿಟ್ ಆಧಾರದ ಮೇಲೆ ಹಾಗೂ ಮೆರಿಟ್ ಕಮ್ ಪೇಮೆಂಟ್ ಸೀಟುಗಳನ್ನು ಮೆರಿಟ್ ಕಮ್ ಪೇಮೆಂಟ್(ಆಯಾ ಕೋಟಾಗಳಿಗೆ ನಿಗದಿಪಡಿಸಿರುವ ಶುಲ್ಕಗಳನ್ನು ಪಾವತಿಸಿಕೊಂಡು) ಆಧಾರದ ಮೇಲೆ ದಿನಾಂಕ:15–11–2024ರೊಳಗೆ ಭರ್ತಿ ಮಾಡಿಕೊಳ್ಳಲು ಅನುಮತಿಸಲಾಗಿದೆ.
3. ಕುವೆಂಪು ವಿಶ್ವವಿದ್ಯಾಲಯದ ಯಾವುದೇ ಕೋಟಾದಡಿ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದ ಪಕ್ಷದಲ್ಲಿ ಅನ್ಯ ವಿಶ್ವವಿದ್ಯಾಲಯಗಳ ಅರ್ಹ ಅಭ್ಯರ್ಥಿಗಳನ್ನು ಕುವೆಂಪು ವಿಶ್ವವಿದ್ಯಾಲಯದ ಅಭ್ಯರ್ಥಿಗಳೆಂದೇ ಪರಿಗಣಿಸಿ, ಮೆರಿಟ್ ಸೀಟುಗಳನ್ನು ಮೆರಿಟ್ ಆಧಾರದ ಮೇಲೆ ಹಾಗೂ ಮೆರಿಟ್ ಕಮ್ ಪೇಮೆಂಟ್ ಸೀಟುಗಳನ್ನು ಮೆರಿಟ್ ಕಮ್ ಪೇಮೆಂಟ್(ಆಯಾ ಕೋಟಾಗಳಿಗೆ ನಿಗದಿಪಡಿಸಿರುವ ಶುಲ್ಕಗಳನ್ನು ಪಾವತಿಸಿಕೊಂಡು) ಆಧಾರದ ಮೇಲೆ ದಿನಾಂಕ:15–11–2024ರೊಳಗೆ ಭರ್ತಿ ಮಾಡಿಕೊಳ್ಳಲು ಅನುಮತಿಸಲಾಗಿದೆ.
4. **ಈಗಾಗಲೇ ಮೆರಿಟ್ ಕಮ್ ಪೇಮೆಂಟ್ ಕೋಟಾದಡಿ ಪ್ರವೇಶಾತಿ ಮಾಡಿಕೊಂಡಿರುವ ವಿಭಾಗಗಳಲ್ಲಿ ಖಾಲಿ ಉಳಿಯುವ ಸೀಟುಗಳನ್ನು ಮೆರಿಟ್ ಕಮ್ ಪೇಮೆಂಟ್ ಕೋಟಾದಡಿಯಲ್ಲಿಯೇ ಭರ್ತಿಮಾಡಿಕೊಳ್ಳುವುದು.**

15/11/24

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ
ಶಂಕರಘಟ್ಟ-577451

ಗೆ,

ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರು/ ಸಂಯೋಜನಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.

ಪ್ರತಿಗಳು:

1. ಆಪ್ತ ಸಹಾಯಕರು, ಕುಲಪತಿಗಳು: ಕುಲಸಚಿವರು: ಕುಲಸಚಿವರು(ಪ): ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ. 2. ಕಛೇರಿ ಪ್ರತಿ.